ಕರ್ನಾಟಕ ಸರ್ಕಾರ

**<u>ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ</u>**

ಸಂ.ಡಿಟಿಇ/01/ಎಸಿಎಂ(2)/2020-21

ಆಯುಕ್ತರವರ ಕಛೇರಿ,
ತಾಂತ್ರಿಕ ಶಿಕ್ಷಣ ಭವನ,
ಅರಮನೆ ರಸ್ತೆ, ಬೆಂಗಳೂರು-560 001.
ದಿನಾಂಕ:31-07-2020.

**-:: ಸುತ್ತೋಲೆ ::-**

| | |
|---|---|
| **ವಿಷಯ:** | 2020-21ನೇ ಶೈಕ್ಷಣಿಕ ಸಾಲಿನ ರಾಜ್ಯದ ಸರ್ಕಾರಿ ಹಾಗೂ ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ಪ್ರಥಮ ಡಿಪ್ಲೋಮಾ ಪ್ರವೇಶವನ್ನು Non-Interactive Counselling ಮೂಲಕ ನಡೆಸುವ ಸಂಬಂಧ ಪೂರ್ವಭಾವಿ ಸಿದ್ಧತೆ ಕುರಿತು ಚರ್ಚಿಸಲು ವಿಡಿಯೋ ಕಾನ್ಫರೆನ್ಸ್ ಸಭೆ ನಡೆಸುವ ಬಗ್ಗೆ. |
| **ಉಲ್ಲೇಖ:** | ಏಕ ಕಡತ ಸಂ. ಡಿಟಿಇ/01/ಎಸಿಎಂ(2)/2020-21, ದಿ:29-07-2020. |

-0000000-

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕೋವಿಡ್-19 ಸಾಂಕ್ರಾಮಿಕ ರೋಗವು ಜಾಗತಿಕವಾಗಿ ಹರಡುತ್ತಿರುವ ಹಿನ್ನೆಲೆಯಲ್ಲಿ 2020-21ನೇ ಶೈಕ್ಷಣಿಕ ಸಾಲಿಗೆ ರಾಜ್ಯದ ಸರ್ಕಾರಿ/ಅನುದಾನಿತ/ಖಾಸಗಿ ಅನುದಾನರಹಿತ (ಸರ್ಕಾರಕ್ಕೆ ಸ್ವ-ಇಚ್ಛೆಯಿಂದ ಅಧ್ಯರ್ಪಣೆ ಮಾಡಿದ ಸೀಟುಗಳು) ಪಾಲಿಟೆಕ್ನಿಕ್‌ಗಳಲ್ಲಿ ಪ್ರಥಮ ಡಿಪ್ಲೋಮಾ ಪ್ರವೇಶಾತಿಯನ್ನು ಆನ್‌ಲೈನ್ ನಾನ್-ಇಂಟರಾಕ್ಟೀವ್ ಕೌನ್ಸಲಿಂಗ್ (ಆನ್‌ಲೈನ್ ಆಪ್ಷನ್ ಎಂಟ್ರಿ) ಮೂಲಕ ನಡೆಸಲು ಸರ್ಕಾರವು ಉಲ್ಲೇಖ(1)ರಲ್ಲಿ ಅನುಮತಿಸಿದೆ.

ಈ ನಿಟ್ಟಿನಲ್ಲಿ, ಪ್ರವೇಶಾತಿ ಪ್ರಕ್ರಿಯೆಯ ಸಂಬಂಧ ಪೂರ್ವ ಸಿದ್ಧತೆ ಮಾಡಿಕೊಳ್ಳುವ ಸಲುವಾಗಿ ಹಾಗೂ ಸಾಫ್ಟ್‌ವೇರ್ ಪ್ರದರ್ಶನ (Software Demonstration) ಕುರಿತು **<u>ದಿ:03-08-2020ರಂದು ಸೋಮವಾರ ಪೂರ್ವಾಹ್ನ 11.00 ಘಂಟೆಗೆ ವಿಡಿಯೋ ಕಾನ್ಫರೆನ್ಸ್ ಸಭೆಯನ್ನು ಕರೆಯಲಾಗಿದ್ದು,</u>** ಸದರಿ ಸಭೆಗೆ Google Meet ನಲ್ಲಿ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ನ ಪ್ರಾಂಶುಪಾಲರು ಹಾಗೂ 05 ಉಪನ್ಯಾಸಕರು ತಪ್ಪದೇ ಭಾಗವಹಿಸಲು ಸೂಚಿಸಲಾಗಿದೆ. ಸದರಿ ವಿಡಿಯೋ ಕಾನ್ಫರೆನ್ಸ್ ಸಭೆಗೆ ಸಂಸ್ಥೆಗಳ ಡಿಟಿಇ ಇ-ಸ್ಟುಡಿಯೋ ಸಂಯೋಜಕರು ಸೂಕ್ತ ವ್ಯವಸ್ಥೆಯನ್ನು ಮಾಡಿಕೊಳ್ಳತಕ್ಕದ್ದು.

ಡಿಪ್ಲೋಮಾ ಪ್ರವೇಶ ಪ್ರಕ್ರಿಯೆಯು ಸುಗಮವಾಗಿ ನಡೆಯಲು ಪ್ರಾಂಶುಪಾಲರೊಂದಿಗೆ 05 ಉಪನ್ಯಾಸಕರನ್ನು ನೇಮಿಸಿಕೊಂಡು ಸದರಿ ಮಾಹಿತಿಯನ್ನು **<u>https://forms.gle/Knjzpmc7u6WcfknL8</u>** ಗೂಗಲ್ ಫಾರ್ಮ್ ಲಿಂಕ್‌ನಲ್ಲಿ ಅಪ್‌ಲೋಡ್ ಮಾಡಲು ಸೂಚಿಸಿದೆ. ಈ ಲಿಂಕ್‌ನಲ್ಲಿ ಅಪ್‌ಲೋಡ್ ಮಾಡಿದ ಮಾಹಿತಿಯನ್ನು ಬದಲಾವಣೆ ಮಾಡಲು ಅವಕಾಶ ಇರುವುದಿಲ್ಲ.

ಜಂಟಿ ನಿರ್ದೇಶಕರು(ಆಡಳಿತ)

ಗೆ,

ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ನ ಪ್ರಾಂಶುಪಾಲರುಗಳಿಗೆ - ಅನುಸರಣೆಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.

**<u>ಪ್ರತಿ:-</u>**

1. ಆಯುಕ್ತರ ಆಪ್ತಶಾಖೆಗೆ - ಮಾಹಿತಿಗಾಗಿ
2. ನಿರ್ದೇಶಕರ ಆಪ್ತಶಾಖೆಗೆ - ಮಾಹಿತಿಗಾಗಿ
3. ಜಂಟಿ ನಿರ್ದೇಶಕರು(ಸಿಡಿಸಿ) ಆಪ್ತಶಾಖೆಗೆ - ಮಾಹಿತಿಗಾಗಿ
4. ಕಾರ್ಯದರ್ಶಿಯವರ ಆಪ್ತಶಾಖೆಗೆ - ಮಾಹಿತಿಗಾಗಿ.
5. ಇ-ಗವರ್ನೆನ್ಸ್ ವಿಭಾಗಕ್ಕೆ - ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸುವುದು.
6. ಕಛೇರಿ ಪ್ರತಿ.